# ಶ್ರೀ ಜಗದ್ಗುರು ರೇಣುಕಾಚಾರ್ಯ ವಿಜ್ಞಾನ, ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ

#9, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 009

23–09–2021

## ರಾಷ್ಟ್ರೀಯ ಶಿಕ್ಷಣ ನೀತಿ – 2020 ರ ಕಾರ್ಯಾಗಾರದ ವರದಿ




ದಿನಾಂಕ 23–09–2021ರ ಗುರುವಾರ ಅಪರಾಹ್ನ 2:30ರಿಂದ 4:30ರ ವರೆಗೆ ಬಿ.ಕಾಂ ವಿಭಾಗದ ಅಧ್ಯಾಪಕರುಗಳಿಗೆ, ಪ್ರಥಮ ಬಿ.ಕಾಂ ವಿದ್ಯಾರ್ಥಿಗಳಿಗೆ, ಮತ್ತು ಅವರ ಪೋಷಕರಿಗೆ ರಾಷ್ಟ್ರೀಯ ಶಿಕ್ಷಣ ನೀತಿ – 2020 ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಸಂಪನ್ಮೂಲ ವ್ಯಕ್ತಿ ಹಾಗೂ ಮುಖ್ಯ ಅತಿಥಿಗಳಾಗಿ ಸಿಂಧಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಎಸ್. ಶ್ರೀಕಂಠ ರವರು ಭಾಗವಹಿಸಿದ್ದರು.

ಡಾ. ಬಿ. ಎಸ್. ಶ್ರೀಕಂಠ ರವರು ಹೊಸ ರಾಷ್ಟ್ರೀಯ ಶಿಕ್ಷಣ ನೀತಿ – 2020'ರ ಧ್ಯೇಯೋದ್ಧೇಶಗಳು ಮತ್ತು ಅನುಷ್ಠಾನದ ರೀತಿಯನ್ನು ಸವಿವರವಾಗಿ ಅಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ತಿಳಿಸಿದರು. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ವಿದ್ಯಾರ್ಥಿಗಳಿಗೆ ಯಾವ ಅನುಕೂಲಗಳಿವೆ ಮತ್ತು ಯಾವ ಯಾವ ವಿಷಯಗಳನ್ನು ಆಯ್ಕೆ ಮಾಡಿಕೊಂಡರೆ ಮುಂದೆ ಅವರ ಭವಿಷ್ಯದಲ್ಲಿ ಉತ್ತಮ ಅವಕಾಶಗಳು ಸಿಗುತ್ತವೆ ಎಂದು ತಿಳಿಸಿದರು. ಬಿ.ಕಾಂ. ವಿದ್ಯಾರ್ಥಿಗಳ ಪಠ್ಯಕ್ರಮ ಮತ್ತು ತೆರೆದ ಆಯ್ಕೆ ವಿಷಯಗಳ ಬಗ್ಗೆ ವಿದ್ಯಾರ್ಥಿಗಳ ಗಮನವನ್ನು ಸೆಳೆದರು. ಈ ಮೊದಲಿನ ಶಿಕ್ಷಣ ನೀತಿಯ ಮತ್ತು ಹೊಸ ಶಿಕ್ಷಣ ನೀತಿಯ ಬಗೆಗಿನ ವ್ಯತ್ಯಾಸಗಳನ್ನು ವಿವರಿಸಿದರು. ಈ ಮೊದಲಿನ ಶಿಕ್ಷಣ ನೀತಿಯ ಮತ್ತು ಹೊಸ ಶಿಕ್ಷಣ ನೀತಿಯ ಬಗೆಗಿನ ವ್ಯತ್ಯಾಸಗಳನ್ನು ವಿವರಿಸಿದರು. ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಪದವಿಯು ನಾಲ್ಕು ವರ್ಷದ್ದಾಗಿರುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಆಯ್ಕೆಗಳಿವೆ ಎಂದು ತಿಳಿಸಿದರು. ವಿದ್ಯಾರ್ಥಿಗಳಿಗೆ ಕೆಲಸ ಸಿಕ್ಕಿದರೆ ಅಥವಾ ವಿದ್ಯಾಭ್ಯಾಸವನ್ನು ಮುಂದುವರಿಸಲು ಏನಾದರೂ ತೊಂದರೆ ಆದಲ್ಲಿ ಆಯಾ ವರ್ಷದ ಕೊನೆಯಲ್ಲಿ ಒಳ್ಳೆ ಅಂಕಗಳನ್ನು ಗಳಿಸಿ ಪರೀಕ್ಷೆ ಪಾಸಾದಲ್ಲಿ, ಪ್ರಮಾಣ ಪತ್ರಗಳನ್ನೂ ನೀಡಲಾಗುವುದು. ಮೊದಲನೇ ವರ್ಷದ ಕೊನೆಯಲ್ಲಿ ವಿದ್ಯಾರ್ಥಿ ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸಲು ಸಾಧ್ಯವಾಗದಿದ್ದಲ್ಲಿ, ಪರೀಕ್ಷೆಯಲ್ಲಿ ಉತ್ತೀರ್ಣನಾದರೆ ಪ್ರಮಾಣ ಪತ್ರವನ್ನು ಕೊಡಲಾಗುವುದು ಹಾಗೇ ಎರಡನೇ

ವರ್ಷದ ಕೊನೆಯಲ್ಲಿ ಉತ್ತೀರ್ಣನಾದರೆ ಡಿಪ್ಲೊಮೋ ಪ್ರಮಾಣ ಪತ್ರವನ್ನು, ಮೂರನೇ ವರ್ಷದ ಕೊನೆಯಲ್ಲಿ ಪದವಿ ಪ್ರಮಾಣ ಪತ್ರಗಳನ್ನೂ ನೀಡಲಾಗುವುದು. ಪುನ: ವಿದ್ಯಾರ್ಥಿಯು ನಿಗಧಿತ ಸಮಯದಲ್ಲಿ ವಿದ್ಯಾಭ್ಯಾಸವನ್ನು ಮುಂದುವರೆಸಬಹುದು. ಆದ್ದರಿಂದ ರಾಷ್ಟ್ರೀಯ ಶಿಕ್ಷಣ ನೀತಿಯು ಹೆಚ್ಚು ವಿದ್ಯಾರ್ಥಿ ಕೇಂದ್ರೀಕೃತವಾಗಿದೆ ಎಂದು ವಿವರಿಸಿದರು. Discipline Elective (ಶಿಸ್ತು ಆಯ್ಕೆ) Open Elective (ತೆರೆದ ಆಯ್ಕೆ) Compulsory subjects (ಕಡ್ಡಾಯ ವಿಷಯಗಳು) ಬಗ್ಗೆ ಮಾಹಿತಿ ನೀಡಿ ಈ ರಾಷ್ಟ್ರೀಯ ಶಿಕ್ಷಣ ನೀತಿಯು ವಿದ್ಯಾರ್ಥಿಗಳ ಸಾಮರ್ಥ್ಯ ಹಾಗೂ ಕೌಶಲ್ಯ ಹೆಚ್ಚಿಸುತ್ತದೆ ಎಂದು ತಿಳಿಸಿದರು. ಪ್ರತಿಯೊಬ್ಬ ವಿದ್ಯಾರ್ಥಿಯು ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಕಲಿಯಬೇಕಿದೆ. ಕನ್ನಡವನ್ನು +2ವರೆಗೆ ಕಲಿಯದಿದ್ದರೆ ಕನ್ನಡ ಭಾಷೆಯ ಪಠ್ಯಕ್ರಮ ಬೇರೆ ಇರುತ್ತದೆ. ಕನ್ನಡವನ್ನು +2ವರೆಗೆ ಕಲಿತವರಿಗೆ ಕನ್ನಡ ಭಾಷೆಯ ಪಠ್ಯಕ್ರಮ ಬೇರೆ ಇರುತ್ತದೆ ಎಂದು ತಿಳಿಸಿದರು.

ಬಿ.ಕಾಂ. ವಿಭಾಗದ ಸಹಾಯಕ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾದ ಶ್ರೀಮತಿ ಚೈತ್ರ. ಎಂ, ರವರು ಎಲ್ಲರನ್ನೂ ಸ್ವಾಗತಿಸಿ ಮುಖ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟರು.

ಪ್ರಾಂಶುಪಾಲರಾದ ಡಾ. ಎಸ್. ಕಾಂತರಾಜುರವರು ಕಾಲೇಜಿನ ಸಂಕ್ಷಿಪ್ತ ಪರಿಚಯ ನೀಡಿದರು.

ಬಿ.ಕಾಂ. ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಶೋಭಾರಾಣಿ ರವರು ಎಲ್ಲರನ್ನೂ ವಂದಿಸಿದರು ಮತ್ತು ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ರೇಷ್ಮ ರವರು ಕಾರ್ಯಕ್ರಮವನ್ನು ನಿರೂಪಿಸಿದರು.






ಡಾ. ಬಿ.ಎಲ್. ಮಂಜುಳ
ಸಂಚಾಲಕರು
(ರಾಷ್ಟ್ರೀಯ ಶಿಕ್ಷಣ ನೀತಿ 2020)

**PRINCIPAL**
**Sri Jagadguru Renukacharya College of Science, Arts & Commerce**
**Bengaluru-560 009.**